# ಬ್ರಹ್ಮವೇತ್ತ

ಪ್ರಾಚೀನಕಾಲದಲ್ಲಿ ತುಂಬಾ ಶ್ರೇಷ್ಠರು ಯಾರು? ಎಂಬೊಂದು ಪ್ರಶ್ನೆ ಮೂಡಿತ್ತು. ಈ ಪ್ರಶ್ನೆಗೆ ಹಲವರು ಹಲವು ಬಗೆಯ ಉತ್ತರಗಳನ್ನು ನೀಡಿದ್ದರು. ಆದರೆ, ಉಪನಿಷತ್ತಿನ ಕಾಲದಲ್ಲಿ ಕೇಳಿದ ಈ ಪ್ರಶ್ನೆಗೆ ಧೀರವಾದ ಉತ್ತರಕೊಟ್ಟವನು 'ಇತರಾ' ಎಂಬ ಹೆಂಗಸಿನ ಮಗನಾದ ಐತರೇಯ. ಈತ ಋಗ್ವೇದ ಶಾಖೆಗೆ ಸೇರಿದ ಒಂದು ಬ್ರಾಹ್ಮಣ, ಒಂದು ಆರಣ್ಯಕ ಮತ್ತೊಂದು ಉಪನಿಷತ್ತನ್ನು ಲೋಕಕ್ಕೆ ನೀಡಿದ್ದು ಈತನ ಗರಿಮೆ. ಈತನ ನಿಜವಾದ ಜೀವನ ಗೊತ್ತಿಲ್ಲ. ಆದರೆ, ಅಷ್ಟುಇಷ್ಟು ವಿವರಗಳು ಸಿಗುತ್ತವೆ. ಈತ ಯಾಜ್ಞವಲ್ಕ್ಯ ಮಂಡೂಕಿ ಎಂಬ ಬ್ರಾಹ್ಮಣನ ಹಿರಿಯ ಪತ್ನಿ ಇತರಾ ಎಂಬುವನ ಮಗ. 'ಇತರಾ' ಎಂಬುವಳು ಒಬ್ಬ ಸಾಮಾನ್ಯ ದಾಸಿ. ಇವಳ ಮಗ ಐತರೇಯ. ಹುಟ್ಟಿದಾಗಿನಿಂದ ಅತ್ಯಂತ ಸೋಮಾರಿ. ಆದರೆ, ಅಷ್ಟಾಕ್ಷರಿಯ ಉಪಾಸಕ. ಯಾಜ್ಞವಲ್ಕ್ಯ ಮಂಡೂಕಿಗೆ 'ಪಿಂಗಳಾ' ಎಂಬ ಬ್ರಾಹ್ಮಣ ಹೆಂಡತಿಯೂ ಇದ್ದಳು. ಈಕೆಗೆ ಹಲವು ಮಕ್ಕಳಿದ್ದರು. ಯಾಜ್ಞವಲ್ಕ್ಯ ಒಬ್ಬ ಪುರೋಹಿತ. ಇತರಾ ಬೇರೆ ಕಡೆ ಮನೆ ಮಾಡಿಕೊಂಡಿದ್ದಳು. ಮಗ ಸೋಮಾರಿಯಾಗಿದ್ದಕ್ಕೆ ಇತರಾಳಿಗೆ ತುಸು ಬೇಸರವಿತ್ತು. ಆಕೆ ಮಗನ ಬಗೆಗೆ ಬೇಸರಗೊಂಡು ಗದರಿಸಿದಾಗ ಐತರೇಯ ಬ್ರಹ್ಮತತ್ವಕ್ಕೆ ಸಂಬಂಧಿಸಿದ ಕೆಲವು ಮಾತುಗಳನ್ನು ಆಡಿದ. ಒಂದು ದಿನ ಐತರೇಯ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಹೋದ. ಯಾಗಕರ್ಮ ಮಾಡುತ್ತಿದ್ದ ಯಾಜ್ಞವಲ್ಕ್ಯ ಐತರೇಯನನ್ನು ನಿರ್ದಾಕ್ಷಿಣ್ಯವಾಗಿ ದೂಡಿದ. ಐತರೇಯನಿಗೆ ಇದರಿಂದ ಅವಮಾನವಾಯಿತು. ಆಗ ನೊಂದ ಐತರೇಯನ ಸ್ಥಿತಿಯನ್ನು ಕಂಡು ಸುತ್ತಮುತ್ತಲಿದ್ದ ಗಿಡಮರಗಳು ಕನಿಕರಿಸಿದವು. ನೆಲಕ್ಕೆ ಬಿದ್ದ ಐತರೇಯನನ್ನು 'ಭೂದೇವಿ' ಪ್ರತ್ಯಕ್ಷಳಾಗಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು 'ಕೃಪೆ'ಮಾಡಿದಳು. ಆಗ ಐತರೇಯನಿಗೆ 'ಮಹೀದಾಸ' ಎಂಬ ಹೆಸರು ಬಂದಿತು. ಈತ ಮುಂದೆ 'ಬ್ರಹ್ಮಜ್ಞಾನಿ' ಎಂದು ಪ್ರಥಿತನಾದ.

ಆ ಕಾಲದಲ್ಲಿ 'ಕೋಟಿತೀರ್ಥ' ಎಂಬ ಪ್ರದೇಶವಿತ್ತು. ಅಲ್ಲಿ ಯಜ್ಞಯಾಗಾದಿಗಳು ನಡೆಯುತ್ತಿದ್ದವು. ಹರಿಮೇಧನೆಂಬ ಋಷಿ ಒಂದು ಬೃಹದ್ಯಾಗ ಮಾಡಲು ನಿಶ್ಚಯಿಸಿದ. ಆದರೆ, ಯಾಗಕ್ಕೆ ಮುಖ್ಯ ಪುರೋಹಿತರು ಬೇಕಿತ್ತು. ಆ ಸಮಯದಲ್ಲಿ ಐತರೇಯ ಮಹೀದಾಸ ಕೋಟಿತೀರ್ಥಕ್ಕೆ ಬಂದ. ಅಲ್ಲಿ ನಡೆಯುತ್ತಿದ್ದ ಯಾಗದ ಮುಖ್ಯ ಪುರೋಹಿತನಾಗಿ ನಡೆಸಿಕೊಡಲು ಐತರೇಯ ಒಪ್ಪಿಕೊಂಡ. ಆಗ ಅಲ್ಲಿದ್ದ ಋಷಿಗಳೂ ಮುನಿಗಳೂ ಹಲವು ಪ್ರಶ್ನೆಗಳನ್ನು ಅವನಿಗೆ ಹಾಕಿದರು. ಅವುಗಳಿಗೆಲ್ಲಾ ಉತ್ತರ ನೀಡಿದ. ಆ ಸಂದರ್ಭದಲ್ಲಿ 'ಶ್ರೇಷ್ಠರು ಯಾರು?' ಎಂಬ ಪ್ರಶ್ನೆ ಋಷಿಗಳಿಂದ ಹೊರಟಿತು. ಆಗ ಐತರೇಯ ಮಹೀದಾಸ 'ಜಡಕ್ಕಿಂತ ಜೀವಿಯೂ, ಜೀವಿಗಳಲ್ಲಿ ಪ್ರಾಣಿಯೂ ಆ ಪ್ರಾಣಿಗಳಲ್ಲಿ ಮನುಷ್ಯನೂ ಮನುಷ್ಯರಲ್ಲಿ ಬ್ರಾಹ್ಮಣನೂ ಅಂಥ ಬ್ರಾಹ್ಮಣರಲ್ಲಿ ವಿದ್ವಾಂಸನೂ ವಿದ್ವಾಂಸರಲ್ಲಿ ಕೃತಬುದ್ಧಿ ಇರುವವನೂ ಅವರಲ್ಲಿ ಬ್ರಹ್ಮವಾದಿಯೂ ಅಂಥ ಬ್ರಹ್ಮವಾದಿಗಳಲ್ಲಿ ಬ್ರಹ್ಮಜ್ಞಾನಿಯೂ ಬ್ರಹ್ಮಜ್ಞಾನಿಗಳಲ್ಲಿ ಯಾರು ಬ್ರಹ್ಮೈಕ್ಯರೋ ಅವರು ಶ್ರೇಷ್ಠರೆಂದು' ಉತ್ತರ ನೀಡಿದ. ಅಲ್ಲಿದ್ದ ಋಷಿಗಳಿಗೆ ಅತ್ಯಂತ ಆನಂದವಾಯಿತು. ಅವನು ಯಜ್ಞವನ್ನು ಸುಸೂತ್ರವಾಗಿ ನಡೆಸಿಕೊಟ್ಟ. ಹರಿಮೇಧನೆಂಬ ಋಷಿಯು ತನ್ನ ಮಗಳನ್ನು ಐತರೇಯನಿಗೆ ಮದುವೆ ಮಾಡಿಕೊಟ್ಟ. ಇವನೇ ಮುಂದೆ ದಶೋಪನಿಷತ್ತುಗಳಲ್ಲಿ ಒಂದಾದ ಐತರೇಯೋಪನಿಷತ್ತನ್ನು ಲೋಕಕ್ಕೆ ಕೊಟ್ಟು ಶ್ರೇಷ್ಠ 'ಬ್ರಹ್ಮವೇತ್ತ' ಎನಿಸಿಕೊಂಡ.

ಐತರೇಯ ಉಪನಿಷತ್ತು ತುಂಬಾ ಚಿಕ್ಕದು. ಆದರೆ, ಅತಿ ಗಹನವಾದುದು! ಈ ಉಪನಿಷತ್ತಿನ ನಾಲ್ಕನೆಯ ಕೊನೆ ಅಧ್ಯಾಯದಲ್ಲಿ ಮಾತುಮನಸ್ಸುಗಳ ಸಂಬಂಧವನ್ನು ಬಲು ಮಾರ್ಮಿಕವಾಗಿ ಅವನು ಹೇಳಿದ್ದಾನೆ. ಅವನ ಮಾತು ಹೀಗಿದೆ: 'ಓಂವಾಙ ಮನಸಿ ಪ್ರತಿಷ್ಠಿತಾ, ಮನೋ ಮೇ ವಾಚಿ ಪ್ರತಿಷ್ಠಿತ. ಮಾ ವಿರಾವೀರ್ಮ ಅವತು ವೇದಸ್ಯ ಮ ಆಣಿಸ್ಥಃ ಶ್ರುತಂ ಮೇ ಮಾ ಪ್ರಹಾ ಸೀ ರ ನೇ ನಾ ಧೀ ತೇ ನಾ ಹೋ ರಾ ತ್ರಾನ್ ಸಂದಧಾಮಿ. ಋತಂ ವದಿಷ್ಯಾಮಿ, ಸತ್ಯಂ ವದಿಷ್ಯಾಮಿ, ತನ್ಮಾಮವತು, ತದ್ವಾಕ್ತಾರಮವತು, ಅವತು ಮಾಮವತು ವಕ್ತಾರಮ್ ಅವತು ವಕ್ತಾರಮ್'. ಓಂ ಶಾಂತಿಃ ಶಾಂತಿಃ ಶಾಂತಿಃ' ಎಂಬ ಮಾತಿದೆ. 'ನನ್ನ ಮಾತು ಮನಸ್ಸಿನಲ್ಲಿ ನೆಲೆಸಿರಲಿ. ನನ್ನ ಮನಸ್ಸು ಮಾತಿನಲ್ಲಿ ನೆಲೆಗೊಳ್ಳಲಿ. ಹೇ ಬ್ರಹ್ಮವೇ, ನನಗೆ ಪ್ರತ್ಯಕ್ಷನಾಗು. ವಾಕ್‌ಮನಸ್ಸುಗಳೇ ನನಗೆ ವೇದಾರ್ಥಗಳನ್ನು ತರಲು ಸಮರ್ಥರಾಗಲಿ. ನಾನು ತಿಳಿದ ವೇದ ನನ್ನನ್ನು ಬಿಡದಿರಲಿ. ಈ ಅಧ್ಯಯನದಿಂದ ಅಹೋರಾತ್ರಿಗಳನ್ನು ನಾನು ಸೇರಿಸುತ್ತೇನೆ. ಋತವನ್ನೇ ನಾನು ಹೇಳುತ್ತೇನೆ. ಸತ್ಯವನ್ನೇ ನಾನು ಹೇಳುತ್ತೇನೆ. ಬ್ರಹ್ಮ ನನ್ನನ್ನು ಕಾಪಾಡಲಿ. ಅದು ಆಚಾರ್ಯನನ್ನು ಸಂರಕ್ಷಿಸಲಿ' ಇಲ್ಲಿಯ ಐತರೇಯನ ಮಾತು ಅವನನ್ನು 'ಬ್ರಹ್ಮವೇತ್ತ'ನನ್ನಾಗಿಸಿತು. ವಚನಕಾರರು 'ನುಡಿಯಲ್ಲಿ ನಡೆತುಂಬಿ, ನಡೆಯಲ್ಲಿ ನುಡಿತುಂಬಿ' ಎಂದು ಪ್ರಾರ್ಥಿಸುತ್ತಾರಷ್ಟೆ. 'ಮಾತು ಮನಂಗಳು ಒಂದಾಗುವ' ಕ್ರಿಯೆಯನ್ನು ಶರಣರು ಹಾರೈಸುತ್ತಾರೆ. 'ಮಾತೆಂಬುದು ಜ್ಯೋತಿರ್ಲಿಂಗ' ಎಂದು ಅಲ್ಲಮಪ್ರಭು ಕಂಠೋಕ್ತವಾಗಿ ಸಾರುತ್ತಾನೆ. ನಮ್ಮ ದೇಶದ ಅನುಭಾವಿಗಳು 'ಮಾತು– ಮನಸ್ಸು'ಗಳು ಒಂದಾಗುವ ತತ್ತ್ವವನ್ನು ಅದರ ಸಂಕಷ್ಟವನ್ನು ಮನೋಜ್ಞವಾಗಿ ಹಾಡುಗಳಲ್ಲಿ ತಿಳಿಸಿದ್ದಾರೆ. ಭಾರತದ ಸಂತರೆಲ್ಲ ಮಾತು 'ಗಾಳಿಯಲ್ಲಿ ತೇಲಿ ಹೋಗದೆ' ಮನಸ್ಸಿನಲ್ಲಿ ಪ್ರತಿಷ್ಠಾಪಿತಗೊಳ್ಳುವ ಲೀಲೆಯನ್ನು ಸಾರಿದ್ದಾರೆ. ತಮಿಳಿನ ನಾಯನ್ಮಾರರೂ ಮಹಾರಾಷ್ಟ್ರದ ಅನುಭಾವಿಗಳೂ ಕಾಶ್ಮೀರದ ಪ್ರತ್ಯಭಿಜ್ಞರೂ 'ಮಾತು– ಮನಸ್ಸು' ಐಕ್ಯಗೊಳ್ಳುವ ಪ್ರಕ್ರಿಯೆಯನ್ನು ಪ್ರಯೋಗದ ಮೂಲಕ ಸಾಧಿಸಿ ತೋರಿಸಿದ್ದಾರೆ. ಉಪನಿಷತ್ ಕಾಲದ ಐತರೇಯ 'ಮಾತು– ಮನಸ್ಸು'ಗಳನ್ನು ಒಂದೆಡೆ ಪ್ರತಿಷ್ಠಾಪಿಸಿ 'ಬ್ರಹ್ಮವೇತ್ತ' ಎಂದು ಪ್ರಖ್ಯಾತಿಯನ್ನು ಪಡೆದ. ಇದು ಪ್ರತಿಯೊಬ್ಬನೂ ಸಾಧನೆಯಿಂದ ಸಾಧಕರು ಗಬಹುದೆಂಬುದನ್ನು ಬ್ರಹ್ಮವೇತ್ತರಾಗಿ ಸುಪ್ರಸಿದ್ಧರಾಗಬಹುದೆಂಬುದನ್ನು ಪ್ರತ್ಯಕ್ಷವಾಗಿ ಸೂಚಿಸುತ್ತದೆ.

■ **ಪುರಂಜೀವಿ**

## ಮಾತೇ ಮುತ್ತು

- ನಾವೇ ಅರಸು ನಾವೇ ಆಳು. ಇಂತಾದೊಡನೆಯೇ ಮುಗಿಯುವುದು ಗೋಳು.

—ಪುತಿನ

- ಬೇಸರಕ್ಕೆ ಕುತೂಹಲವೇ ಔಷಧಿ. ಕುತೂಹಲಕ್ಕೆ ಯಾವ ಔಷಧಿಯೂ ಇಲ್ಲ.

—ಎಲೆನ್ ಪಾರ್

- ನಾನು ಬದುಕಬೇಕೆಂದರೆ, ಏನಾದರು ಮಾಡುತ್ತಲೇ ಇರಬೇಕು. ಏನಾದರೂ...

—ಲೀ ಅಯಾಕ್ಕೊಕಾ

- ಹೊಸ ಪುಸ್ತಕವೊಂದನ್ನು ನೀವು ನಿಮ್ಮ ಮನೆಗೆ ತಂದಿರೆಂದರೆ, ಹೊಸ ಹಿತೈಷಿಯೊಬ್ಬ ನಿಮ್ಮ ಮನೆಗೆ ಬಂದನೆಂದು ತಿಳಿಯಬೇಕು.

—ಹಾ.ಮಾ. ನಾಯಕ

- ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ವಿಧಿ ಮಳೆ ಸುರಿಯೆ! ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ!

—ಡಿ.ವಿ. ಗುಂಡಪ್ಪ

- ಬಾಳನ್ನು ಹಸನಾಗಿಸಿಕೊಳ್ಳಬೇಕು. ಪ್ರಹಸನವಾಗಿಸಿಕೊಳ್ಳಬಾರದು.

—ಕೆ.ಎಸ್. ನಿಸಾರ್ ಅಹಮದ್

- ನಾನು ಸೋತಿಲ್ಲ. ಪ್ರಯೋಗ ಸಾಧ್ಯವಾಗದಂತಹ 10000 ದಾರಿಗಳನ್ನು ಕಂಡುಕೊಂಡಿದ್ದೇನೆ.

—ಎಡಿಸನ್

- ಅವಸರದ ಜೀವನ ಮತ್ತು ಕವಲಾಗಿರುವ ಗುರಿ, ನವನಾಗರಿಕತೆಗೆ ಹಿಡಿದಿರುವ ಎರಡು ದೊಡ್ಡ ರೋಗಗಳು.

—ಮ್ಯಾಥ್ಯೂ ಅರ್ನಾಲ್ಡ್